'ನಿಜಾ ನಿಜಾ...'

ಇಬ್ಬರೂ ಅಲ್ಲಿಂದ ಹತ್ತಿರದಲ್ಲೇ ಇರುವ ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಬಳಿಯ ಮೆಟ್ರೊ ನಿಲ್ದಾಣದತ್ತ ಹೆಜ್ಜೆ ಹಾಕಿದರು.

★★★

ಯಲಚೇನಹಳ್ಳಿ ಬಳಿಯ ದೊಡ್ಡ ವಸತಿ ಸಮುಚ್ಚಯದಲ್ಲಿರುವ ಮೇದಿನಿಯ ವಿಶಾಲವಾದ ಮನೆಯಲ್ಲಿ ಯಾರೂ ಇರಲಿಲ್ಲ. ಅವಳು ಅವನನ್ನು ಹಾಲ್‌ನ ಸೋಫಾದಲ್ಲಿ ಕುಳ್ಳಿರಿಸಿ, ರೂಮಿಗೆ ಹೋಗಿ ಬಟ್ಟೆ ಬದಲಾಯಿಸಿ, ಬಾತ್ ರೂಮಿಗೆ ಹೋಗಿ ಮುಖ ತೊಳೆದುಕೊಂಡು ಬಂದಳು. ಬಳಿಕ ಅವನೂ ಬಾತ್ ರೂಮಿಗೆ ಹೋಗಿ ಮುಖ ತೊಳೆದುಕೊಂಡು ಬಂದ. ಇಬ್ಬರೂ ಸೋಫಾದಲ್ಲಿ ಕುಳಿತರು.

ಸುತ್ತಲೂ ಗಮನಿಸಿದ ಅವನು, 'ಮನೆ ವಿಶಾಲವಾಗಿ ಚೆನ್ನಾಗಿದೆ. ಇಂಥಾ ಸುಂದರವಾದ ಮನೇಲಿ ಜೀವಿಸ್ತಿರೊ ನೀವೇ ಅದೃಷ್ಟವಂತರು' ಎಂದ.

'ಇಲ್ಲಿಗೆ ಬಂದವ್ರೆಲ್ಲಾ ಹೀಗೇ ಹೇಳ್ತಾರೆ. ನನ್ನ ಮನೆ ಅಷ್ಟು ಚೆನ್ನಾಗಿದೆಯಾ?'

'ಹೂಂ, ಮೈಸೂರ್ ಪ್ಯಾಲೇಸ್ ತರಾ ಇದೆ.'

'ಥ್ಯಾಂಕ್ ಯೂ... ಟೈಮ್ ಒಂಬತ್ತು ಗಂಟೆಯಾಗ್ತಿದೆ. ಊಟಾ ಮಾಡೋಣ್ವಾ?'

'ಓಹ್, ಅಡುಗೆ ರೆಡಿಯಾಗಿದೆಯಾ?'

'ಹೂಂ, ನಮ್ಮನೆ ಕೆಲಸದವಳು ಕಮಲಮ್ಮ ಅಡುಗೆ ರೆಡಿ ಮಾಡಿಟ್ಟು ಹೋಗಿರ್ತಾಳೆ.'

'ಹೋ... ಹಾಗಾ, ಸರಿ ಹಾಗಾದ್ರೆ ಬನ್ನಿ.'

ಒಂದು ಬದಿ ಇದ್ದ ಡೈನಿಂಗ್ ಟೇಬಲ್ ಮೇಲೆ ಸಿದ್ಧವಾದ ಅಡುಗೆಯ ಪಾತ್ರೆಗಳನ್ನು ಇಡಲಾಗಿತ್ತು. ತಟ್ಟೆಗಳು ಸಿದ್ಧವಾಗಿದ್ದವು. ಇಬ್ಬರೂ ಮುಖಾಮುಖಿಯಾಗಿ ಕುಳಿತರು. ಪಾತ್ರೆಗಳಲ್ಲಿದ್ದ ಬಿಸಿಬಿಸಿಯಾದ ಅಡುಗೆಯನ್ನು ಮೇದಿನಿ ಅವನ ತಟ್ಟೆಗೂ ಬಡಿಸಿ, ತಾನೂ ಬಡಿಸಿಕೊಂಡಳು.

ಬಿರಿಯಾನಿ ಮತ್ತು ಚಿಕನ್ ತುಂಡುಗಳನ್ನು ತಿಂದ ಮೋಹನ, 'ವಾವ್ ತುಂಬಾ ಚೆನ್ನಾಗಿದೆ. ಬೆಂಗಳೂರಲ್ಲೆಲ್ಲೂ ನಾನು ಇಂಥಾ ಬಿರಿಯಾನಿ ತಿಂದಿರಲಿಲ್ಲ. ಈ ಚಿಕನಂತೂ ಸೂಪರ್. ನಿಮ್ಮ ಜೊತೆ ಬರದೇ ಇದ್ದಿದ್ರೆ ಈ ಭಾಗ್ಯ ಕಳಕೊತಿದ್ದೆ. ಆ ಕಮಲಮ್ಮನಿಗೆ ಪುಣ್ಯಾ ಬರಲಿ' ಎಂದ.

ಅವನ ಮಾತು ಕೇಳಿಸಿಕೊಂಡು ನಕ್ಕ ಮೇದಿನಿ, 'ನಾಳೆ ಬಂದಾಗ ಅವಳಿಗೆ ಹೇಳ್ತಿನಿ ಬಿಡಿ. ಅವಳಾದ್ರೂ ಖುಷಿ ಪಡ್ತಾಳೆ. ಇಷ್ಟೇ ಅಲ್ಲ ಊಟ ಆದಮೇಲೆ ನಿಮಗೆ ಇನ್ನೊಂದು ಸರ್‌ಪ್ರೈಸ್ ಇದೆ' ಎಂದಳು. ಅವನು 'ಹೌದಾ? ಏನಪ್ಪಾ ಅದು ಸರ್‌ಪ್ರೈಸ್!?' ಎಂದು ಕುತೂಹಲಿಯಾದ. ಊಟ ಮಾಡುತ್ತ ಹಾಗೇ ಇಬ್ಬರ ಮಾತುಗಳು ಮುಂದುವರಿದವು.

'ಹೌದು, ನಿಮ್ಮ ಲೈಫ್ ಇಷ್ಟೊಂದು ಐಶಾರಾಮಿಯಾಗಿದೆಯಲ್ಲ. ನಿಮ್ಮ ಯಜಮಾನ್ರು ಏನ್ಮಾಡ್ತಾರೆ? ಏನು ಬಿಜಿನೆಸ್ ಮನ್ ಇದ್ದಾರಾ?' ಎಂದು ಸಹಜವಾಗಿ ಕೇಳಿದ. ಆ ಪ್ರಶ್ನೆಗೆ ತಕ್ಷಣ ಉತ್ತರಿಸಲಾಗದೇ ಮೇದಿನಿ ತಡಬಡಿಸಿ, 'ಅವ್ರಾ!?... ಅವ್ರು...' ಎಂದು ಸುಮ್ಮನಾದಳು. ಅವನಿಗೆ ಗೊಂದಲವಾಯಿತು. ಅವಳ ಮುಖವನ್ನೇ ನೋಡಿ,

'ಏನ್ಮಾಡ್ತಾರೆ?' ಎಂದು ಮತ್ತೊಮ್ಮೆ ಪ್ರಶ್ನಿಸಿದ.

'ಯಜಮಾನ್ರು... ಯಜಮಾನ್ರು ಇಲ್ಲಾ ಮೋಹನ್. ಇಲ್ಲಿ ನನಗೆ ನಾನೇ ಯಜಮಾನಿ' ಎಂದಳು ಗತ್ತಿನಿಂದ.

'ಅಂದ್ರೆ!?...' ದಿಗಿಲುಗೊಂಡು ಆಶ್ಚರ್ಯದಿಂದ ಕೇಳಿದ.

'ನನಗಿನ್ನೂ ಮದುವೆನೇ ಆಗಿಲ್ಲ ಮೋಹನ್. ನಾನು ಒಬ್ಬಂಟಿ!'